ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ತಾಂತ್ರಿಕ ಶಿಕ್ಷಣವನ್ನು ಬಲಪಡಿಸಲು ವಿಶ್ವ ಬ್ಯಾಂಕ್ ನೆರವು ನೀಡುವ ಯೋಜನೆಯಲ್ಲಿ ಕರ್ನಾಟಕ ರಾಜ್ಯವನ್ನು ಆಯ್ಕೆ ಮಾಡಲಾಗಿದೆ. ಈಗಾಗಲೇ ಈ ಬಗ್ಗೆ ಒಪ್ಪಂದವಾಗಿದ್ದು ಈ ಯೋಜನೆಯನ್ನು ಪ್ರಾರಂಭಕ್ಕೆ ತರಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯಲ್ಲಿ ಹಾಸನದ ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರ್ ಕೋರ್ಸ್‌ನ್ನು ಪ್ರಾರಂಭಿಸುವ ಕಾರ್ಯಕ್ರಮವನ್ನು ಆಳವಡಿಸಲಾಗಿದೆ. ಇದು ಇನ್ನೂ ಯೋಜನಾ ಹಂತದಲ್ಲಿದ್ದು, ಇದನ್ನು ಹಿಂತೆಗೆದುಕೊಂಡಿರುವುದಿಲ್ಲ. ವಿಶ್ವ ಬ್ಯಾಂಕ್ ಈ ಕಾರ್ಯಕ್ರಮವನ್ನು ಹಂತಹಂತವಾಗಿ ಕಾರ್ಯಗತಗೊಳಿಸಬೇಕಾಗುತ್ತದೆ. ಈ ಕಾರ್ಯಕ್ರಮವನ್ನು ೧೯೯೬-೯೪ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.

ix) ಉಲಾಳದಲ್ಲಿ ಪೋಲೀಸ್ ಸ್ಟೇಷನ್ ಮತ್ತು ಪೋಲೀಸರ ವಸತಿ ಗೃಹಗಳನ್ನು ನಿರ್ಮಿಸುವುದು.

ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಮಾನ್ಯ ಅಧ್ಯಕ್ಷರೇ, ಸುಮಾರು ೮೦ ಸಾವಿರ ಜನರಿಗೆ ಒಳಪಟ್ಟ ಉಳ್ಳಾಲ ಪೋಲೀಸ್ ಸ್ಟೇಶನ್ ಇದೆ. ಈ ಪೋಲೀಸ್ ಸ್ಟೇಶನ್ ಅಂದಿನಿಂದ ಇಂದಿನ ವರೆಗೂ ಬಾಡಿಗೆ ಕಟ್ಟಡದಲ್ಲಿ ಇದೆ. ಜಾಗ ಕೂಡ ತುಂಬಾ ಕಡಿಮೆ ಇದೆ. ಪೋಲೀಸ್ ಸ್ಟೇಶನ್ ಕಟ್ಟಲು ಮತ್ತು ಪೋಲೀಸರಿಗೆ ವಸತಿ ಗೃಹ ರಚಿಸಲು ಎರಡೂವರೆ ಎಕರೆ ಜಮೀನನ್ನು ಖರೀದಿ ಮಾಡಿ ಆದಕ್ಕೆ ಬೇಲಿ ಹಾಕಿ ಕಳೆದ ನಾಲ್ಕೈದು ವರ್ಷಗಳಿಂದ ಹಾಗೆಯೇ ಇಡಲಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಕಟ್ಟಡಗಳನ್ನು ಕಟ್ಟಲು ಕೇಳುತ್ತಾ ಬಂದಿದ್ದರೂ ಇನ್ನೂ ಕಟ್ಟಡಗಳ ನಿರ್ಮಾಣವಾಗಿಲ್ಲ, ಆದ ಕಾರಣ ಉಳ್ಳಾಲದಲ್ಲಿ ಕಾದಿರಿಸಿಕೊಂಡ ಎರಡೂವರೆ ಎಕರೆ ಜಮೀನಿನಲ್ಲಿ ಪೋಲೀಸ್ ಸ್ಟೇಶನ್ ಮತ್ತು ಪೋಲೀಸರ ವಸತಿ ಗೃಹಗಳನ್ನು ಈ ವರ್ಷವೇ ಕಟ್ಟಿಸಿಕೊಡುವಂತಾಗಬೇಕೂ ಎಂದು ನಾನೂ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆ ಕೊಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

. ರೂಪಾಯಿ ೧೫.೭೭ ಲಕ್ಷ ಅಂದಾಜು ವೆಚ್ಚದಲ್ಲಿ ಉಳ್ಳಾಲದಲ್ಲಿ ಒಂದು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಹನ್ನೆರಡು ಪೊಲೀಸ್ ಪೇದೆಗಳ ವಸತಿ ಗೃಹಗಳನ್ನು ಕಟ್ಟಲು ಕೆಲಸವನ್ನು ಪ್ರಾರಂಭಿಸಲಾಗಿದೆ. ಭೂಮಿ ಅಗೆಯುವ ಕೆಲಸ ಮುಗಿದಿದ್ದು ಅಸ್ತಿಭಾರದ ಕಾರ್ಯ ನಡೆಯುತ್ತಿದೆ.

ಉಳ್ಳಾಲದಲ್ಲಿ ಪೊಲೀಸ್ ಠಾಣೆಯ ಕಟ್ಟಡವನ್ನು ಕಟ್ಟುವ ಪ್ರಸ್ತಾವನೆಯನ್ನು ವಸತಿ ಯೇತರ ಕಟ್ಟಡಗಳ ಬಗ್ಗೆ ಹಣದ ಅಭಾವದ ಕಾರಣ ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ಮುಂದಿನ ಆರ್ಥಿಕ ವರ್ಷದಲ್ಲಿ ಹಣದ ಲಭ್ಯತೆಯನ್ನು ನೋಡಿಕೊಂಡು ಈ ಕೆಲಸವನ್ನು ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

೩. ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಎಂ.ಎಲ್. ಉಸ್ತಾದ್.— ಮಾನ್ಯ ಅಧ್ಯಕ್ಷರೇ, ಬೆಳಗಾಂ ತಾಲ್ಲೂಕಿನ ಉಚ್ಚಗಾವಿ ಕ್ಷೇತ್ರದಲ್ಲಿ ಸರಕಾರದಿಂದ ಸಾರ್ವಜನಿಕರ ಕೆಲಸವನ್ನು ಕೂಡಲೇ ಮಾಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.— ಅರ್ಜಿಯನ್ನು ಒಪ್ಪಿಸಲಾಯಿತು.

ಶ್ರೀ ಜಿ. ಆರ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕೊಟ್ಟಾರಿ ಜಾತಿಯನ್ನು ಹಿಂದುಳಿದ ವರ್ಗವೆಂದು ಪರಿಗಣಿಸುವ ಬಗ್ಗೆ ಅರ್ಜಿಯನ್ನು ಸಭೆಯಲ್ಲಿ ತಮ್ಮ ಮೂಲಕ ಅರ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.